(ಇಂದು ದಿಃ 26-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಪಾಟಿ ಸವಾಲು ಃ- ಶ್ರೀ. ವಿ.ಎನ್.ಆರ್. ರವರಿಂದ ಪ್ರತಿವಾದಿ 1 ರಿಂದ 8 ರವರ ಪರವಾಗಿ -**

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ದಿಃ 08-11-1964 ರಂದು ಜನಿಸಿರುತ್ತೇನೆ. ನನಗೆ 1970 ರಿಂದ ನಮ್ಮ ಕುಟುಂಬದ ಬಗ್ಗೆ ಮತ್ತು ನನ್ನ ತಾಯಿ ಕುಟುಂಬದ ಬಗ್ಗೆ ವಿಚಾರಗಳು ಗೊತ್ತಾಗಿರುತ್ತದೆ. 1 ನೇ ಪ್ರತಿವಾದಿ ಅವರ ತಂದೆಗೆ 4 ಜನ ಹೆಣ್ಣು ಮಕ್ಕಳು ಆದ ನಂತರ ಜನಿಸಿರುತ್ತಾರೆ. ವಾದಿ 1 ಮತ್ತು 2 ರವರ ತಾಯಿಯ ಜನ್ಮ ದಿನಾಂಕ ಗೊತ್ತಿಲ್ಲ. ಅವರು ಯಾವ ವರ್ಷ ವಿವಾಹವಾದರು ಎಂದು ಗೊತ್ತಿಲ್ಲ. ನನ್ನ ತಾಯಿ ಯಾವಾಗ ಜನಿಸಿದರು ಎಂದು ಗೊತ್ತಿಲ್ಲ ಆದರೆ ಅವರು 1962 ರಲ್ಲಿ ವಿವಾಹವಾಗಿರುತ್ತಾರೆ. 7 ನೇ ಪ್ರತಿವಾದಿ ಯಾವಾಗ ವಿವಾಹವಾಗಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ದೊಡ್ಡಮ್ಮ ಗೌರಮ್ಮನವರು 1977-78 ರಲ್ಲಿ ಮೃತಪಟ್ಟಿರುತ್ತಾರೆ. 1990 ರಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾರೆ. 3 ನೇ ವಾದಿ ಯಾವ ವರ್ಷ ವಿವಾಹವಾದರು ಎಂದು ಗೊತ್ತಿಲ್ಲ. 3 ನೇ ವಾದಿಯ ಮಗಳಿಗೆ ಈಗ ಸುಮಾರು 65 ವರ್ಷಗಳಾಗಿರುತ್ತದೆ. ವಾದಿ 1 ಮತ್ತು 2 ರವರ ತಾಯಿ ಸುಮಾರು 1938-39 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ವಾದಿ 1 ಮತ್ತು 2 ರವರ ತಾಯಿ ಗೌರಮ್ಮನವರ ಹೆಸರಿನಲ್ಲಿರುವ 1953 ಮತ್ತು 1962 ರ ಕ್ರಯ ಪತ್ರಗಳನ್ನು ನೋಡಿರುವುದಿಲ್ಲ. 3 ನೇ ವಾದಿ 1942 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿ 1944-45 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. 7 ನೇ ವಾದಿ 1946-47 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ 1950 ರಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ದಿಃ 20-01-1981 ರಂದು ಮುನಿಸ್ವಾಮಿ ಅಲಿಯಾಸ್ ಹುಚ್ಚಪ್ಪ ಮೃತಪಟ್ಟಿರುತ್ತಾರೆ. ದಾವಾ (ಬಿ) ಷಡ್ಯೂಲ್ ಸ್ವತ್ತನ್ನು ಮೇಲೆ ಹೇಳಿದ ಹುಚ್ಚಪ್ಪ 1953 ರಲ್ಲಿ ಮಾರಾಟ ಮಾಡಿರುತಾತರೆ ಎಂದರೆ ಸರಿ. ಮಾರಾಟ ಮಾಡಿ ಬಂದ ಹಣದಿಂದ ವಾದಿ 1 ಮತ್ತು 2 ರವರ

ತಾಯಿ ಹೆಸರಿನಲ್ಲಿ ಮಾಲೂರು ತಾಲ್ಲೂಕಿನ ಹೆಟ್ಟಗೋಡಿಯಲ್ಲಿ ಮೇಲೆ ಹೇಳಿದ ಎರಡು ಕ್ರಯ ಪತ್ರಗಳಂತೆ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 1972 ರಲ್ಲಿ ವಿವಾಹವಾಗಿರುತ್ತಾರೆ. 1 ನೇ ಪ್ರತಿವಾದಿ ಹೆಂಡತಿ ಮನೆಯವರು ಅನುಕೂಲವಾಗಿರುತ್ತಾರೆ. 1 ನೇ ಪ್ರತಿವಾದಿ ತನ್ನ ಹೆಂಡತಿ ಮನೆಯವರು ನೀಡಿದ ಹಣದಿಂದ ದಾವಾ (ಬಿ) ಷಡ್ಯೂಲ್ ಸ್ವತ್ತನ್ನು 1973 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೇ ಲೆ ಹೇಳಿದ ಹುಚ್ಚಪ್ಪನವರು ಕಾಡಅಗ್ರಹಾರ ಗ್ರಾಮದ ಸರ್ವೆ ನಂ. 4 ರಲ್ಲಿ 12 ಗುಂಟೆ ಮತ್ತು ಸರ್ವೆ ನಂ. 16/2 ರಲ್ಲಿ 1 ಎಕರೆ 20 ಗುಂಟೆ ಮಾರಾಟ ಮಾಡಿರುತ್ತಾರೆ. ಮೇಲೆ ಹೇಳಿದ ಹುಚ್ಚಪ್ಪನವರು ಸರ್ವೆ ನಂ. 4/2 ಅನ್ನು ಮಾರಾಟ ಮಾಡಿದ ಹಣದಿಂದ ನನ್ನ ತಾಯಿಗೆ ಒಂದು ಮನೆ ಕಟ್ಟಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹುಚ್ಚಪ್ಪನವರು ಬದುಕಿದ್ದಾಗಲೇ ನಮ್ಮ ತಾಯಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ 1 ಎಕರೆ 33 ಗುಂಟೆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿ ಲಿಂಗಾಪುರ ಗ್ರಾಮದಲ್ಲಿರುತ್ತದೆ. ನನ್ನ ತಾಯಿ 1 ಎಕರೆ 10 ಗುಂಟೆ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಎರಡೂ ಸ್ವತ್ತುಗಳನ್ನು ಅವರ ತಂದೆ ಜೀವಿತಾ ಕಾಲದಲ್ಲಿ ಖರೀದಿ ಮಾಡಿರುತ್ತಾರೆ. 7 ನೇ ಪ್ರತಿವಾದಿ ಮಗಳ ಮದುವೆಯನ್ನು ಹುಚ್ಚಪ್ಪನವರೇ ನೆರವೇರಿಸಿರುತ್ತಾರೆ ಎಂದರೆ ಸರಿಯಲ್ಲ.

ನನಗೂ 1 ನೇ ಪ್ರತಿವಾದಿಗೂ ಮಾತುಕತೆ ಇರುವುದಿಲ್ಲ. ನಾನು ದಿ: 15-12-2012 ರಂದು ಪಂಚಾಯ್ತಿಯಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ (ಎ) ಷಡ್ಯೂಲ್ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು. ನನ್ನ ತಾತ ತಮ್ಮ ಜೀವಿತಾಕಾಲದಲ್ಲಿ ಯಾವುದೇ ದಾಖಲಾತಿಗಳನ್ನು ಬರೆದಿರುವುದಿಲ್ಲ. ದಾವಾ (ಎ) ಷಡ್ಯೂಲ್ ಸ್ವತ್ತುಗಳು ದಿ: 14-02-2007 ರಲ್ಲಿ 10 ನೇ ಪ್ರತಿವಾದಿಗೆ ಮಾರಾಟವಾಗಿರುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ಸಾಕ್ಷಿ ಅಸ್ವಸ್ಥರಾದ್ದರಿಂದ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.